# ‘ರಾಜಕಾರಣ ಪ್ರವೇಶಿಸಿದರೂ ರಾಜಕಾರಣಿಯಾಗಲಿಲ್ಲ’

ಪ್ರಜಾವಾಣಿ ವಾರ್ತೆ 27.6.21

**ಬೆಂಗಳೂರು:** ‘ಸಿದ್ಧಲಿಂಗಯ್ಯ ಅವರು ರಾಜಕಾರಣ ಪ್ರವೇಶಿಸಿದರೂ ರಾಜಕಾರಣಿಯಾಗಿ ಬದಲಾಗಲಿಲ್ಲ. ಅವರು ಜೀವ ಪರವಾದ ಬರಹಗಳಿಂದ ಹೆಸರಾಗಿದ್ದರು. ಭಾಷೆ, ನೆಲ, ಜಲ ಹಾಗೂ ಪರಿಸರದ ಬಗ್ಗೆ ಹೆಚ್ಚಿನ ಕಾಳಜಿ ಹೊಂದಿದ್ದರು. ವಿಧಾನಪರಿಷತ್ ಸದಸ್ಯ-ರಾಗಿದ್ದ ಅವಧಿಯಲ್ಲಿ ಸದನದಲ್ಲಿ ಈ ಕುರಿತೇ ಪ್ರಶ್ನೆಗಳನ್ನು ಕೇಳುತ್ತಿದ್ದರು’ ಎಂದು ಸಾಹಿತಿ ಮತ್ತು ಪತ್ರಕರ್ತ ಸರಜೂ ಕಾಟ್ಕರ್ ತಿಳಿಸಿದರು.

ಸಾಹಿತ್ಯ ಅಕಾಡೆಮಿ ಶನಿವಾರ ಆನ್‌ಲೈನ್‌ನಲ್ಲಿ ಆಯೋಜಿಸಿದ್ದ ನುಡಿ ನಮನ ಕಾರ್ಯಕ್ರಮದಲ್ಲಿ ಅವರು ಸಿದ್ಧಲಿಂಗಯ್ಯ ಜೊತೆಗಿನ ಒಡನಾಟ ಮೆಲುಕು ಹಾಕಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, ‘ಸಿದ್ಧಲಿಂಗಯ್ಯ ನನ್ನ ವಿದ್ಯಾರ್ಥಿ ಮಿತ್ರ. ತುಂಬಾ ಸೃಜನಶೀಲ ವ್ಯಕ್ತಿ. ಅವರ ಕಾವ್ಯಗಳು ಹೊಸತನದಿಂದ ಕೂಡಿದ್ದವು. ಸಭೆ, ಸಮಾರಂಭಗಳಲ್ಲಿ ಅವರ ಮಾತುಗಳನ್ನು ಎಲ್ಲರೂ ಕಿವಿಗೊಟ್ಟು ಕೇಳುತ್ತಿದ್ದರು. ಅವರು ಅಷ್ಟು ಉತ್ತಮ ಭಾಷಣಕಾರ’ ಎಂದರು.

ಕೆ.ಶಿವಾರೆಡ್ಡಿ, ‘ಸಿದ್ಧಲಿಂಗಯ್ಯನವರು ಆತ್ಮವಿಶ್ವಾಸದ ಗಣಿಯಾಗಿದ್ದರು. ಸದಾ ಹಸನ್ಮುಖಿಯಾಗಿರುತ್ತಿದ್ದರು’ ಎಂದು ಸ್ಮರಿಸಿದರು.

ವಿಮರ್ಶಕ ಎಸ್.ಆರ್. ವಿಜಯಶಂಕರ, ‘ಸಿದ್ಧಲಿಂಗಯ್ಯ, ಅಂಬೇಡ್ಕರ್ ಅವರ ಬಹುದೊಡ್ಡ ಅನುಯಾಯಿ. ದಲಿತರ ಧ್ವನಿಯೂ ಆಗಿದ್ದ ಅವರು ವಿಧಾನಪರಿಷತ್ ಸದಸ್ಯ-ರಾಗಿದ್ದಾಗ ಸಾಮಾಜಿಕ ಪಿಡುಗುಗಳ ವಿರುದ್ಧ ಗಟ್ಟಿ ಧ್ವನಿ ಎತ್ತಿದ್ದರು’ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್, ‘ಸಿದ್ಧಲಿಂಗಯ್ಯ ಸಾರ್ವಕಾಲಿಕ ಕವಿ. ಕರ್ನಾಟಕದ ಆಚೆಗೂ ಖ್ಯಾತಿ ಹೊಂದಿದ್ದರು. ಮಾನವತೆ ಮತ್ತು ಸಮಾನತೆ ಅವರ ಕಾವ್ಯದ ಜೀವಾಳ’ ಎಂದು ಹೇಳಿದರು.

ತಮಿಳಿನ ಹಿರಿಯ ಲೇಖಕ ಸಿರ್ಪಿ ಬಾಲಸುಬ್ರಹ್ಮಣ್ಯಂ, ‘ಸಿದ್ಧಲಿಂಗಯ್ಯ ಅವರು ಮಾನವೀಯತೆಯ ಪ್ರತಿರೂಪ-ದಂತಿದ್ದರು’ ಎಂದರು.

ಸತೀಶ್ ಕುಲಕರ್ಣಿ, ಪದ್ಮಿನಿ ನಾಗರಾಜು, ಎಲ್.ಎನ್. ಮುಕುಂದ ರಾಜ್, ಪ್ರಭಾ ವರ್ಮಾ, ಕೆ.ಶ್ರೀನಿವಾಸ-ರಾವ್, ಮಹಾಲಿಂಗಯ್ಯ ಇದ್ದರು.